# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-2050/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 16/02/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಸ್ವಯಂ ಪ್ರೇರಣಾ ಪ್ರಕರಣವನ್ನು ಈ ಸಂಸ್ಥೆಯಲ್ಲಿ ನೋಂದಾಯಿಸಿದನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಚಾಮರಾಜನಗರದ ಪ್ರಕಾಶ್ ಬಾಬು ರವರು ದಿ: 21/10/2015 ರಂದು ನೀಡಿದ ದೂರಿನ ಮೇಲೆ ಮಿಸಲೇನಿಯಸ್ ಪ್ರಕರಣ ದಾಖಲಾಗಿ ತನಿಖೆಗೆ ಆದೇಶಿಸಿದ್ದು, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಾಮರಾಜನಗರ ರವರ ತನಿಖಾ ವರದಿ ಸ್ವೀಕರಿಸಿದ ನಂತರ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 7(2)ರಲ್ಲಿ ಪ್ರದತ್ತವಾದ ಅಧಿಕಾರದಡಿ ಪ್ರಕರಣವನ್ನು ನೊಂದಾಯಿಸಲು ಆದೇಶಿಸಿದ್ದು, ಅದರಂತೆ ಸ್ವಯಂ ಪ್ರೇರಿತ ಪ್ರಕರಣವನ್ನು ನೊಂದಾಯಿಸಲಾಗಿರುತ್ತದೆ.

2. ದಿ: 21/10/2015 ರಂದು ಸಲ್ಲಿಸಿದ ದೂರಿನ ಸಾರಾಂಶ:-

ಚಾಮರಾಜನಗರ ಜಿಲ್ಲಾ ಮರುಳು ಮಾನಿಟರಿಂಗ್ ಕಮಿಟಿ ಅಕ್ರಮ ಮರಳು ಮಾರಾಟದಲ್ಲಿ ಶಾಮೀಲಾಗಿರುವ ಬಗ್ಗೆ ಕ್ರಮ ಜರುಗಿಸಲು ದೂರು ಸಲ್ಲಿಸಿದ್ದು, ಸರ್ಕಾರದ ಸುತ್ತೋಲೆ ದಿನಾಂಕ 10/02/2015 ರಲ್ಲಿ ಹೊರ ರಾಜ್ಯದಿಂದ ಬರುವ ಮರಳು ಲಾರಿಗಳಿಗೆ ಸಾಮಾನ್ಯ ದಂಡ ವಿಧಿಸಿ ಗಡಿಯಲ್ಲಿ ಪರ್ಮಿಟ ನೀಡಲು ಸೂಚಿಸಿದ್ದರು ಸಹ, ಮರಳು ಮಾನಿಟರಿಂಗ್ ಕಮಿಟಿಯವರು RGNS ಎಂಟರ್‌ಪ್ರೈಸಸ್ ಎಂದು ಒಂದು ಕಂಪನಿಯ ಹೆಸರಿಟ್ಟು ಆ ಕಂಪನಿಗೆ ಯಾವುದೇ ನಿಬಂಧನೆ ನೀಡದೆ ಒಂದು ಟನ್ ಮರಳಿಗೆ ರೂ.2300/- ಗಳನ್ನು ನಿಗದಿಪಡಿಸಿರುತ್ತಾರೆ. RGNS ಎಂಟರ್‌ಪ್ರೈಸಸ್ ಪಾಂಡಿಚೇರಿಯವರಿಗೆ ಮರಳು ಕಮಿಟಿ ಇಂದ ಮರಳು ಮಾರಾಟಕ್ಕೆ ಅವಕಾಶ ನೀಡಿರುವ ಜಿಲ್ಲಾಡಳಿತ ಪಾಂಡಿಚೇರಿ ಸರ್ಕಾರಕ್ಕೆ ಯಾವುದೇ ಮಾಹಿತಿ ಕೇಳಿರುವುದಿಲ್ಲ. ತಮಿಳುನಾಡು ಹಾಗೂ ಪಾಂಡಿಚೇರಿಯಲ್ಲಿ ಯಾವುದೇ ಖಾಸಗಿ ವ್ಯಕ್ತಿಯ ಮರಳು ಪರ್ಮಿಟ್ ಯಾರ್ಡ್ ಇರುವುದಿಲ್ಲ. ತಮಿಳುನಾಡು ಸರ್ಕಾರದಿಂದ ಮಾತ್ರ ಮರಳು ಹಾಗೂ ಮರಳು ಪರ್ಮಿಟ್ ತಮಿಳುನಾಡಿಗೆ ಮಾತ್ರ ಸೀಮಿತವಿರುತ್ತದೆ. ಕರ್ನಾಟಕ ಸರ್ಕಾರ ಪ್ರತಿ ಲಾರಿಗಳಿಗೂ ಗಡಿಯಲ್ಲಿ ದಂಡವಸೂಲು ಮಾಡಿ ಪರ್ಮಿಟ್ ನೀಡಲು ಸೂಚಿಸಿದ್ದರು RGNS ಎಂಟರ್‌ಪ್ರೈಸಸ್ ನವರ 50 ರಿಂದ 100 ಲಾರಿಗಳು ಹೆಚ್ಚು ಬಾರಹೊತ್ತು ಜಿಲ್ಲೆಗೆ

ಬರುತ್ತಿದ್ದು, ಈ ಲಾರಿಗಳಲ್ಲಿ ರಾಜಧನವಾಗಲಿ, ತೆರಿಗೆ ಆಗಲಿ ದಂಡವಾಗಲಿ ನಿಗದಿಪಡಿಸದೆ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟ ಉಂಟು ಮಾಡಿರುತ್ತಾರೆ ಎಂದು ಆರೋಪಿಸಿರುತ್ತಾರೆ.

3. ದೂರಿನ ಆರೋಪಗಳ ಬಗ್ಗೆ ಪೊಲೀಸ್ ಉಪಾಧೀಕ್ಷಕರು ತನಿಖೆ ಮಾಡಿ ತನಿಖಾ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ "ಮರಳು ಮಾನಿಟರಿಂಗ್ ಕಮೀಟಿಯವರು ದಿನಾಂಕ 30/07/2015 ರಂದು ಚಾಮರಾಜನಗರ ಜಿಲ್ಲೆಯ ಕಾಮಗಾರಿಗಳಿಗೆ ಮರಳನ್ನು ಸಾಗಾಣಿಕೆ, ತೆರಿಗೆ, ಪರ್ಮಿಟ್ ಹಾಗೂ ಇತರೆ ವೆಚ್ಚ ಸೇರಿ ಪ್ರತಿ ಮೆ.ಟನ್‌ಗೆ ರೂ.2,300-00 ಗಳಿಗೆ ಸರಬರಾಜು ಮಾಡುವಂತೆ ಪಾಂಡಿಚೇರಿಯ ಆರ್.ಜಿ.ಎನ್.ಎಸ್ ಎಂಟರ್‌ಪ್ರೈಸಸ್ ರವರಿಗೆ ಅನುಮತಿಯನ್ನು ನೀಡಿರುತ್ತಾರೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರು ಆರ್.ಜಿ.ಎನ್.ಎಸ್ ಎಂಟರ್ ಪ್ರೈಸಸ್ ಕಂಪನಿಗೆ ಸೇರಿದ ಅಧಿಕ ಭಾರ ಮರಳು ಸಾಗಾಣಿಕೆ ಮಾಡಿದ 04 ಲಾರಿಗಳಿಗೆ ದಂಡ ವಿಧಿಸಿರುತ್ತಾರೆ. ಆರ್.ಜಿ.ಎನ್.ಎಸ್ ಎಂಟರ್‌ಪ್ರೈಸಸ್ ಕಂಪನಿಯವರು ತಮಿಳುನಾಡಿನಿಂದ ಕರ್ನಾಟಕಕ್ಕೆ ಚಾಮರಾಜನಗರ ಜಿಲ್ಲೆಯ ಮೂಲಕ ಮರಳು ಸಾಗಾಣಿಕೆ ಮಾಡಲು ಪರ್ಮಿಟ್ ಪಡೆದಿರುವುದಿಲ್ಲ. ಅಕ್ರಮ ಮರಳು ಸಾಗಾಣಿಕೆ ಮಾಡಿರುವ ಸದರಿ ಕಂಪನಿಯ ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿರುವುದಿಲ್ಲ. ಚಾಮರಾಜನಗರ ಜಿಲ್ಲೆಯ ಮೂಲಕ ಮರಳು ಸಾಗಾಣಿಕೆ ಮಾಡಲು ಸದರಿ ಕಂಪನಿಯ ವಾಹನಗಳಿಗೆ ಅನುಮತಿ ನೀಡಿರುವುದಿಲ್ಲ. ಹೊರ ರಾಜ್ಯದಿಂದ ಬಂದ ಮರಳು ಸಾಗಾಣಿಕೆ ವಾಹನಗಳಿಂದ ರಾಜಧನ ಸಂಗ್ರಹಿಸಿರುವುದಿಲ್ಲ. ಸದರಿ ಕಂಪನಿಯ ವಾಹನಗಳಲ್ಲಿ ಅಧಿಕವಾಗಿ ಮರಳನ್ನು ಸಾಗಾಣಿಕೆ ಮಾಡುತ್ತಿದ್ದ ಬಗ್ಗೆ ದಂಡ ವಿಧಿಸಿ ಪರ್ಮಿಟ್ ನೀಡಿರುವುದಿಲ್ಲ. ಅರ್ಜಿಯಲ್ಲಿ ಆಪಾದಿಸಿರುವಂತೆ ತಮಿಳುನಾಡಿನಿಂದ ಕರ್ನಾಟಕದ ಚಾಮರಾಜನಗರ ಜಿಲ್ಲೆಗೆ ಮರಳು ಸಾಗಾಣಿಕೆ ಮಾಡುವ ಆರ್.ಜಿ.ಎನ್.ಎಸ್ ಎಂಟರ್ ಪ್ರೈಸಸ್ ಕಂಪನಿಯವರ ವಾಹನಗಳಲ್ಲಿ ಅಧಿಕವಾಗಿ ಮರಳನ್ನು ಸಾಗಾಣಿಕೆ ಮಾಡುತ್ತಿದ್ದ ಬಗ್ಗೆ ದಂಡ ವಿಧಿಸಿದ್ದು, ರಾಜಧನವಾಗಲಿ, ತೆರಿಗೆಯಾಗಲಿ ಸಂಗ್ರಹಿಸಲಾಗಿಲ್ಲವೆಂಬ ವಿಚಾರವು ವಿಚಾರಣಾ ಕಾಲದಲ್ಲಿ ತಿಳಿದು ಬರುತ್ತದೆ" ಎಂದು ನಮೂದಿಸಿರುತ್ತಾರೆ.

4. 1ನೇ ಎದುರುದಾರರ ಪತ್ರ ದಿನಾಂಕ 09/08/2017ರಲ್ಲಿ ಈ ಕೆಳಕಂಡಂತೆ ನಮೂದಿಸಿರುತ್ತಾರೆ:-

> *2014-15 ಮತ್ತು 2016-17ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಂತ Instream Sand Mining ನಿರ್ಬಂಧ ಇದ್ದುದ್ದರಿಂದ ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರು ಸುತ್ತೋಲೆ ಸಂ.ಗಭೂಇ/ಉನಿ(ಖ,ಆ)/ಮರಳು.ಪ/103/2014-15 ದಿನಾಂಕ 10/02/2015 ರಲ್ಲಿ ಹೊರ ರಾಜ್ಯದಿಂದ ಬರುವ ಮರಳು ಲಾರಿಗಳಿಗೆ ದಂಡ ವಿಧಿಸಿ ರಾಜ್ಯದ ಗಡಿಯಲ್ಲಿ ಪರ್ಮಿಟ್ ವಿತರಿಸಲು ಸುತ್ತೋಲೆ ಹೊರಡಿಸಲಾಗಿತ್ತು. ನಂತರದಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಸದರಿ ಸುತ್ತೋಲೆ ಆದೇಶವನ್ನು ರದ್ದುಪಡಿಸಿರುತ್ತದೆ.*
>
> *ದಿನಾಂಕ 30/07/2015 ರ ಜಿಲ್ಲಾ ಮರಳು ಮಾನಿಟರಿಂಗ್ ಸಮಿತಿ ಸಭೆಯಲ್ಲಿ ಕಟ್ಟಡ ಕಾಮಗಾರಿ ಕೆಲಸಗಳಿಗೆ ಮರಳು ಅಭಾವವಿದ್ದ ಕಾರಣ R.G.N.S Enterprises ರವರಿಗೆ ಮರಳು ಸರಬರಾಜು ಮಾಡಲು ಸಭೆಯಲ್ಲಿ*

Sd/-

ನಿರ್ಣಯಿಸಲಾಗಿತ್ತು. ನಂತರದಲ್ಲಿ ಸಾರ್ವಜನಿಕರ ಆಕ್ಷೇಪಣೆ ಬಂದ ಮೇರೆಗೆ ನಿರ್ಬಂಧಿಸಲಾಗಿರುತ್ತದೆ. ಸದರಿ ಸಭೆಯಲ್ಲಿ R.G.N.S Enterprises ರವರ ಮರಳು ಸರಬರಾಜಿಗೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆರವರು ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಮೈಸೂರಿನವರು ಅನುಸರಿಸುತ್ತಿರುವ ಕ್ರಮಗಳನ್ನು ತಿಳಿದುಕೊಂಡು ಅದೇ ರೀತಿಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿಯೂ ಅನುಷ್ಠಾನಗೊಳಿಸಲು ಸಭೆಯಲ್ಲಿ ಲೋಕೋಪಯೋಗಿ ಇಲಾಖೆಗೆ ತಿಳಿಸಲಾಗಿತ್ತು. ಆದರೆ, ಈ ಬಗ್ಗೆ ಆ ರೀತಿಯ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಸದರಿ R.G.N.S Enterprises ಗೆ ಈ ಕಛೇರಿಯಿಂದ ಯಾವುದೇ ಅನುಮತಿ ಪತ್ರ ಪರವಾನಿಗೆಗಳನ್ನು ನೀಡಲಾಗಿರುವುದಿಲ್ಲ. ಸದರಿಯವರ ಮರಳು ಸಾಗಣೆ ವಾಹನಗಳು ಕಂಡು ಬಂದಲ್ಲಿ ನಿಯಮಾನುಸಾರ ದಂಡ ವಿಧಿಸಿ, ವಸೂಲಿ ಮಾಡಿ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.

5. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ಕೆಳಕಂಡಂತೆ ನಮೂದಿಸಿರುತ್ತಾರೆ:-

"ಜಿಲ್ಲಾ ಮರಳು ಮಾನಿಟರಿಂಗ್ ಸಮಿತಿಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಮಾನ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿದಂತೆ ಸಮಿತಿಯ ಹನ್ನೊಂದು ಸದಸ್ಯರಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ, ಚಾಮರಾಜನಗರ ಇವರೂ ಕೂಡ ಸಮಿತಿಯ ಸದಸ್ಯರಾಗಿರುತ್ತಾರೆ. ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ಸದಸ್ಯ ಕಾರ್ಯದರ್ಶಿಯಾಗಿದ್ದು, ಇವರು ಕಾಲಕಾಲಕ್ಕೆ ನಡೆಯುವ ಜಿಲ್ಲಾ ಮರಳು ಮಾನಿಟರಿಂಗ್ ಸಭೆಯಲ್ಲಿ ಮಂಡಿಸಿದ ವಿಷಯಗಳ ಬಗ್ಗೆ ಜಿಲ್ಲಾ ಮರಳು ಸಮಿತಿಯ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು ಸಮಿತಿಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರ ಒಪ್ಪಿಗೆಯ ಮೇರೆಗೆ ಮಾನ್ಯ ಜಿಲ್ಲಾಧಿಕಾರಿಗಳು ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ.

ದೂರುದಾರರು ದೂರಿನಲ್ಲಿ ತಿಳಿಸಿರುವಂತೆ ನಮ್ಮ ಕಛೇರಿಯ ವತಿಯಿಂದ M/s. RGNS Enterprises ಕಂಪನಿಗೆ ಮರಳು ಸಾಗಾಣಿಕೆ ಮಾಡಲು ಯಾವುದೇ ಅನುಮತಿಯನ್ನು ನೀಡಿರುವುದಿಲ್ಲ.

ದಿನಾಂಕ 30/07/2015ರ ಸಭೆಯ ನಡಾವಳಿಯಲ್ಲಿ ಸೂಚಿಸಿರುವಂತೆ ಅಕ್ರಮ ಮರಳು ಸಾಗಾಣಿಕೆಯನ್ನು ತಡೆಗಟ್ಟಲು ಈ ಕಛೇರಿಯ ಪ್ರವರ್ತನ ಸಿಬ್ಬಂದಿಗೆ ಈ ಕಛೇರಿಯ ಅಧಿಕಾರಿಯವರು ಆಗಿಂದಾಗ್ಗೆ ಸೂಚನೆ ನೀಡಿದ್ದು, ಈ ಕಛೇರಿಯ ಪ್ರವರ್ತನ ಸಿಬ್ಬಂದಿಯು ದಿನಾಂಕ 01/07/2015 ರಿಂದ 31/07/2017 ವರೆಗೆ 29 ಅಧಿಕ ಭಾರ ಸಾಗಾಣಿಕೆಯ ಮರಳು ವಾಹನಗಳಿಗೆ ಪ್ರಕರಣದ ದಾಖಲಿಸಿದ್ದು, ತೆರಿಗೆ ರೂ.2935/- + ದಂಡ ರೂ.3,85,900/- ಒಟ್ಟು ರೂ.3,88,835/-ನ್ನು ಸಂಗ್ರಹಿಸಲಾಗಿದೆ.

Sd/-

ಅಲ್ಲದೇ, ರಾಜ್ಯದ ಗಡಿ ಭಾಗವಾದ ಪುಣಜನೂರು ಮತ್ತು ಗುಂಡ್ಲುಪೇಟೆ ತನಿಖಾ ಠಾಣೆಗಳಲ್ಲಿಯೂ ಅಂತರ ರಾಜ್ಯಕ್ಕೆ ಅಧಿಕ ಭಾರ ಸಾಗಿಸುವ ಮರಳು ಸಾಗಾಣಿಕೆ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ. ತಪಾಸಣಾ ಕಾರ್ಯವು ಕಛೇರಿಯ ನಿರಂತರ ಕಾರ್ಯವಾಗಿದ್ದು, ನಿರಂತರವಾಗಿ ಮರಳು ಸಾಗಾಣಿಕಾ ವಾಹನಗಳ ಮೇಲೆ ನಿಗಾ ವಹಿಸಲಾಗುತ್ತಿದೆ" ಎಂದು ನಮೂದಿಸಿರುತ್ತಾರೆ.

6. ಚಾಮರಾಜನಗರದ ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷರ ವರದಿಯಲ್ಲಿ *M/s. RGNS Enterprises* ಕಂಪನಿಯು ವಾಹನಗಳಲ್ಲಿ ಅಧಿಕವಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದು ದಂಡ ವಿಧಿಸಿದ್ದು, ರಾಜಧನವಾಗಲೀ, ತೆರಿಗೆಯಾಗಲಿ ಸಂಗ್ರಹಿಸಲಾಗಿಲ್ಲವೆಂದು ವಿಚಾರಣೆಯಿಂದ ತಿಳಿದು ಬಂದಿದೆ ಎಂದು ವರದಿಯಲ್ಲಿ ನಮೂದಿಸಿರುತ್ತಾರೆ.

7. ಶ್ರೀ ಪ್ರಕಾಶ್‌ಬಾಬು ರವರು ದೂರಿನಲ್ಲಿ RGNS ಎಂಟರ್‌ಪ್ರೈಸಸ್‌ರವರ ಲಾರಿಗಳು ಹೆಚ್ಚು ಭಾರ ಹೊತ್ತು ಜಿಲ್ಲೆಗೆ ಬರುತ್ತಿದ್ದು, ರಾಜಧನವಾಗಲಿ, ತೆರಿಗೆ ಅಥವಾ ದಂಡವಾಗಲಿ ನಿಗದಿಪಡಿಸದೆ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುತ್ತಾರೆಂದು ಆರೋಪಿಸಿದ್ದು, ತನಿಖಾಧಿಕಾರಿಗಳ ತನಿಖೆಯಲ್ಲಿ ಅಂತಹ ಲಾರಿಗಳಿಗೆ ದಂಡ ವಿಧಿಸಿದ್ದು, ರಾಜಧನ ಅಥವಾ ತೆರಿಗೆ ಸಂಗ್ರಹಿಸಿದದು ಕಂಡು ಬಂದಿರುವುದಿಲ್ಲವೆಂದು ವರದಿ ಸಲ್ಲಿಸಿದ್ದು, ದೂರಿನಲ್ಲಿ ನಮೂದಿಸಿರುವ ಸುತ್ತೋಲೆ ದಿ: 10/02/2015 ಯನ್ನು ನಂತರ ತಾಂತ್ರಿಕ ಕಾರಣಗಳಿಂದ ಸುತ್ತೋಲೆ ಆದೇಶ ರದ್ದುಪಡಿಸಿರುವುದಾಗಿ 1ನೇ ಎದುರುದಾರರು ಆಕ್ಷೇಪಣೆಯಲ್ಲಿ ಸಲ್ಲಿಸಿದ್ದು, RGNS ಎಂಟರ್‌ಪ್ರೈಸಸ್ ಗೆ ಮರಳು ಸಾಗಿಸಲು ಅನುಮತಿ ಪತ್ರ, ಪರವಾನಗಿಗಳನ್ನು ನೀಡಿರುವುದಿಲ್ಲ. ಮರಳು ಸಾಗಿಸಿ ನಿಯಮ ಉಲ್ಲಂಘಿಸಿದ ಲಾರಿಗಳ ಮೇಲೆ ನಿಯಮಾನುಸಾರ ದಂಡ ವಿಧಿಸಿ ವಸೂಲಿ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

8. 2ನೇ ಎದುರುದಾರರವರು ತಮ್ಮ ಆಕ್ಷೇಪಣೆಯಲ್ಲಿ 15 ರಿಂದ 17ನೇ ಸಾಲಿನವರೆಗೆ ಒಟ್ಟು 29 ಅಧಿಕ ಭಾರ ಮರಳು ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿ ದಂಡ ಒಟ್ಟು ಹಣ ರೂ.3,88,835/- ಸಂಗ್ರಹಿಸಿದ್ದಾಗಿ ನಮೂದಿಸಿರುತ್ತಾರೆ.

9. ದೂರಿನ ಅಂಶಗಳು, ತನಿಖಾಧಿಕಾರಿಗಳ ವರದಿ, ಎದುರುದಾರರ ಆಕ್ಷೇಪಣೆಗಳಿಂದ ಅಧಿಕ ಭಾರ ಹೊತ್ತ ಮರಳು ವಾಹನಗಳು ನಿಯಮಬಾಹಿರವಾಗಿ ಸಾಗಾಣಿಕೆಯಲ್ಲಿ ತೊಡಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಮರಳು ಸಾಗಾಣಿಕೆಯ ಬಗ್ಗೆ ಇರುವ ನಿಯಮಗಳ ಕಟ್ಟುನಿಟ್ಟಿನ ಪಾಲನೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವಿದ್ದು ನಿಯಮ ಉಲ್ಲಂಘನೆ ಮಾಡಿದ RGNS ಎಂಟರ್‌ಪ್ರೈಸಸ್ ಲಾರಿಗಳ ಮೇಲಾಗಲಿ ಅಥವಾ ಇತರೆ ಲಾರಿಗಳ ಮೇಲಾಗಲಿ ನಿಯಮಾನುಸಾರ ಕ್ರಮ ಜರುಗಿಸಿ ಸರ್ಕಾರಿ ಸುತ್ತೋಲೆ ಪ್ರಕಾರ ಕ್ರಮ ವಹಿಸಿ ಅಂತಹ ಲಾರಿ ಮಾಲೀಕರು ಮತ್ತು ಚಾಲಕರ ವಿರುದ್ಧ ದಂಡ ವಿಧಿಸಿ ಕ್ರಿಮಿನಲ್ ಮೊಕದ್ದಮೆ ಹೂಡಲು ಹಾಗೂ ನಿಯಮಗಳ ಕಟ್ಟುನಿಟ್ಟಿನ ಪಾಲನೆ ಮಾಡದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸುವುದು ಅವಶ್ಯವಾಗಿರುತ್ತದೆ.

Sd/-

10. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ತಮಿಳುನಾಡಿನಿಂದ ಕರ್ನಾಟಕದ ಚಾಮರಾಜನಗರ ಜಿಲ್ಲೆಗೆ ಅಧಿಕ ಭಾರ ಹೊತ್ತ ಮರಳು ವಾಹನಗಳು ನಿಯಮಬಾಹಿರವಾಗಿ ಸಾಗಾಣಿಕೆಯಲ್ಲಿ ತೊಡಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಮರಳು ಸಾಗಾಣಿಕೆಯ ಬಗ್ಗೆ ಇರುವ ನಿಯಮಗಳ ಕಟ್ಟುನಿಟ್ಟಿನ ಪಾಲನೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವಿದ್ದು ನಿಯಮ ಉಲ್ಲಂಘನೆ ಮಾಡಿದ **RGNS** ಎಂಟರ್‌ಪ್ರೈಸಸ್ ಲಾರಿಗಳ ಮೇಲಾಗಲಿ ಅಥವಾ ಇತರೆ ಲಾರಿಗಳ ಮೇಲಾಗಲಿ ನಿಯಮಾನುಸಾರ ಕ್ರಮ ಜರುಗಿಸಿ ಸರ್ಕಾರಿ ಸುತ್ತೋಲೆ ಪ್ರಕಾರ ಕ್ರಮ ವಹಿಸಿ ಅಂತಹ ಲಾರಿ ಮಾಲೀಕರು ಮತ್ತು ಚಾಲಕರ ವಿರುದ್ಧ ದಂಡ ವಿಧಿಸಿ ಕ್ರಿಮಿನಲ್ ಮೊಕದ್ದಮೆ ಹೂಡಲು ಹಾಗೂ ನಿಯಮಗಳ ಕಟ್ಟುನಿಟ್ಟಿನ ಪಾಲನೆ ಮಾಡದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಒಂದು ತಿಂಗಳೊಳಗೆ ಕ್ರಮ ಕೈಗೊಂಡು, ಕೈಗೊಂಡ ಕ್ರಮವನ್ನು ಈ ಸಂಸ್ಥೆಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 19-2-18

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.